ಮೈಸೂರ ಗೆಜೆಟ್ಟ

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ನವಂಬರ್ ತಾ|| 26, ಸ್ಯ 1887.

ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಖಾಗ.

ಇಂಡ್ಯಗವರ್ಮೆಂಟ್, ರೆಸಿಡಂಟರು, ಚೀಫ್ ಜಡ್ಜ್ಗಳು, ವಗ್ಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಫೈನ್ಯಾಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್ಗಳ ಮೇಲೆ ಲಂಡನ್ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವರುಗಳೊಡನೆ ಮೈಸೂರು ಗವರ್ಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್ಗಳನ್ನು ಎಫೇಸ್ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜೂ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸ್ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಟಿಕೇಟೂದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಫೇಸ್ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡ್ಸರ್ಸ್,
ಕಾಂಪ್ಟ್ರೋಲರ್.

ಇನಾಂ ಇಲಾಖೆ.

ನಂ. 1. ತಾರೀಖು 19ನೇ ನವಂಬರು 1887.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಲೇಟು ದೊಡ್ಡೇರಿ (ಹಾಲಿಚಳ್ಳಕೆರೆ) ತಾಲ್ಲೂಕಿನಲ್ಲಿ ಯಿರತಕ್ಕ ಜಿಲ್ಲರೆ ಇನಾಂಗಳ ಬಾಬತು 136 ಫೈನಲ್ಟೈಟಲ್ಡೀಡ್ಡು ಯಾನೆ ಖಾಯಂ ಪಟ್ಟೇಗಳು ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಗೆ ಬಟವಾಡೇ ಬಗ್ಗೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಅಮಲ್‌ದಾರ್‌ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸ್‌ಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಯಿನಾಂಗಳ ಬಗ್ಯೆ ಸ್ಯ 1881ನೇ ಇಸವಿ ಡಿಸಂಬರ್ 6ನೇ ತಾರೀಖಿನ 21ನೇ ನಂಬರು ಇಸ್ತಿಹಾರುನಾಮೇ ಪ್ರಕಾರ ಕೊಡಲ್ಪಟ್ಟ ಪಟ್ಟೇಗಳು ರದ್ದು ಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ನಂ. 2. ತಾರೀಖು 23ನೇ ನವಂಬರ್ 1887ನೇ ಇಸವಿ.

ಇನಾಂದಾರರಿಗೆ ಯಿದರಿಂದ ತಿಳಿಸುವದೇನಂದರೆ, ಚಾಮರಾಜನಗರ ಮತ್ತು ಮೊಳಕಾಲ್ ಮುರು ತಾಲ್ಲೂಕುಗಳಲ್ಲಿ ಯಿರತಕ್ಕ ಚಿಲ್ಲರೆ ಇನಾಂಗಳ ಬಾಬತು 144 ಫೈನಲ್‌ಟೈಟಿಲ್‌ಡೀಡ್ಡು ಯಾನೆ ಖಾಯಂ ಪಟ್ಟೆಗಳು ಮೈಸೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟುಗಳ ಡಿಪ್ಯೂಟಿ ಕಮ್ಮಿಷನರವರಗಳಿಗೆ ಬಟವಾಡೇ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕುಗಳ ಅಮಲ್‌ದಾರ್ರುಗಳಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸ್ ಬಂದ ಮೇಲೆ ಅವುಗಳನ್ನು ತೆಗದು ಕೊಳ್ಳುವ ಬಗ್ಯೆ ಸದರೀ ಯಿನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕುಗಳ ಅಮಲ್‌ದಾರ್ರುಗಳು ಅಂಥಾ ನೋಟೀಸುಗಳನ್ನು ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

3. ಸದರೀ ಮೇಲ್ಕಂಡ ಚಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಈ ಆಫಿಸಿನ 1881ನೇ ಇಸವಿ ಅಕ್ಟೋಬರು 28ನೇ ತಾರೀಖಿನ 17ನೇ ನಂಬರು ಮತ್ತು ಡಿಸಂಬರು 13ನೇ ತಾರೀಖಿನ 22ನೇ ನಂಬರು ಇಸ್ತಿಹಾರ್‌ನಾಮೆಗಳ ಪ್ರಕಾರ ಕೊಡಲ್ಪಟ್ಟ ಟೈಟಿಲ್‌ಡೀಡ್ಡುಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 1051.

ಮೃತಪಟ್ಟ ಮೂವತ್ತು ಯತ್ತಿನ ಮುದಪ್ಪನ ಹೆಂಡತಿ ಗಂಗಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರಳಾದ ನಾಗಮ್ಮನು, ಮೃತಪಟ್ಟ ಸದರೀ ಗಂಗಮ್ಮನಿಗೆ ಮಗಳಾಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಮುನಿಸಿಪಾರ್ಟೆಟಿಗೆ ಕೀರಿದ ಆಕ್ಕಿಪೇಟೆ ಸ್ಥಳದ ನಾಗಮ್ಮನು ಸದರೀ ವಾಸಸ್ಥಳಾಗಿ ಮೃತಪಟ್ಟ ಗಂಗಮ್ಮನ ಜಿಂದಗೀ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ನಾಗಮ್ಮನ ಅರ್ಜೀಯನ್ನು 1887ನೇ ಇಸವಿ ಡಿಸಂಬರ್ ತಿಂಗಳು ತಾರೀಖು 16ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ನವಂಬರ್ ತಿಂಗಳು 21ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳಿಯಾದ ಡಿಕ್ರೀದೇಣೀದಾರ ಬೆಂಗಳೂರು ಕುಂಬಾರಪೇಟೇಲಿರತಕ್ಕ ದಲ ಲಖಾನನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ಮಿ|| ನಂಬರ್ 638.

ಹುಕ್ಕುಂ.

ಮೇಲ್ಕಂಡ ದಲಾಲಖಾನನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀರಾದ ಮೆ|| ಸಿ. ಕ್ರೈಸ್